

**ಕೊಯಮತ್ತೂರಿನ ಕೀರ್ತಿಲಾಲ್ಸ್ ಫ್ಯಾಕ್ಟರಿಯಲ್ಲಿ ಒಡವೆಯ ಕುಸುರಿ ಕೆಲಸದಲ್ಲಿ ತಲ್ಲೀನರಾದ ಕಾರ್ಮಿಕರು**

ಒಡವೆಗಳನ್ನು ಶೇ.60ರಷ್ಟು ಮಹಿಳೆಯರು ಇಷ್ಟಪಡುತ್ತಾರೆ.

ಸ್ಪಾರ್ಕ್ಲಿಂಗ್ ಡೈಮಂಡ್: ಮದುಮಗಳು ಯಾವತ್ತೂ ಬಯಸುವ ಅತ್ಯಂತ ಹೊಳಪುಳ್ಳ ಒಡವೆ ಇದು. ವಜ್ರ ಮತ್ತು ಎಮರಾಲ್ಡ್‌ಗಳನ್ನು ಬಳಸಿ ವಿನ್ಯಾಸ ಮಾಡುವ ಈ ಒಡವೆ ಕ್ಲಾಸಿಕ್ ಫ್ಯಾಷನ್ ಆಗಿದೆ. ನೆಕ್ಲೆಸ್ ಮತ್ತು ಜುಮ್ಕಾಗಳು ಕೆಂಪು, ನೇರಳೆ ಮತ್ತು ಹೊನ್ನಿನ ಬಣ್ಣದ ಸೀರೆ ಅಥವಾ ಲೆಹೆಂಗಾಗಳಿಗೆ ಅತ್ಯಂತ ಸೂಕ್ತವಾಗಿ ಒಪ್ಪುವಂಥದ್ದು.

ಸ್ಟೇಟ್‌ಮೆಂಟ್ ಪೀಸ್: ಮದುವೆಯ ಹೆಣ್ಣು ವಜ್ರದಿಂದ ಮಾಡಿದ ಕನಿಷ್ಠ ಎರಡು ಸ್ಟೇಟ್‌ಮೆಂಟ್ ಪೀಸ್ ಅನ್ನು ಧರಿಸಿಕೊಳ್ಳಲೇ ಬೇಕು. ಮಾಂಗ್ಟಿಕಾ ತೋಳ್ಬಂದಿ ವಿಭಿನ್ನ ಮತ್ತು ವಿಶಿಷ್ಟ ಲುಕ್ ಕೊಡುತ್ತದೆ.

ಬಹು ಉದ್ದೇಶಿತ (ಮಲ್ಟಿಪರ್ಪಸ್) ಆಭರಣ ಕೂಡ ಹೊಸ ವಿನ್ಯಾಸದಲ್ಲಿ ಬಂದಿದೆ. ಇದು ಸಿಂಗಲ್‌ಪೀಸ್ ಆರ್ನಮೆಂಟ್ ಆಗಿದ್ದು, ಒಂದೇ ಆಭರಣವನ್ನು ಹಾರವಾಗಿ, ಕಿವಿಯೋಲೆ ಆಗಿ, ಬ್ರೇಸ್‌ಲೆಟ್ ಆಗಿ ಮತ್ತು ಸರವಾಗಿ ಬಳಸಬಹುದು. ಇದೀಗ 'ಕ್ಲಾಸಿಕ್ ಡಿಸೈನ್' ಕೂಡ ಡೈಮಂಡ್ ಒಡವೆಯಲ್ಲಿ ಲಭ್ಯ. ಹಗುರವಾದ ಒಡವೆ ಸಂಗ್ರಹವೂ ವಜ್ರದಲ್ಲಿ ಸಿಗುತ್ತಿದೆ. ಹೀಗಾಗಿ ಸಾಮಾನ್ಯ ಜನರೂ ಕಡಿಮೆ ಬೆಲೆಯಲ್ಲಿ ವಜ್ರದ ಒಡವೆಯನ್ನು ಖರೀದಿಸಬಹುದು. ಇದು ಮಧ್ಯಮವರ್ಗದ ಮಹಿಳೆಯರಿಗೆ ವರದಾನ. ಇದರಲ್ಲೂ ವಿವಿಧ ಪರಿಕಲ್ಪನೆಯ ವಿನ್ಯಾಸಗಳಿವೆ. ಫ್ಲೋರಲ್ ಡಿಸೈನ್, ದ್ರಾಕ್ಷಿ ಗೊಂಚಲಿನಂಥ ಹಣ್ಣು ಹಂಪಲು ವಿನ್ಯಾಸ, ಲಕ್ಷ್ಮಿ, ಗಣೇಶ, ಸರಸ್ವತಿ ಮುಂತಾದ ದೇವಾನುದೇವತೆಗಳ ಪ್ರತಿರೂಪ, ನವಿಲು ವಿನ್ಯಾಸ.. ಹೀಗೆ ವಿನ್ಯಾಸದಲ್ಲಿ ಅನನ್ಯತೆ ಇರುವ ಕಾರಣ ಮಹಿಳೆಯರು ವಜ್ರದೊಡವೆ ಖರೀದಿಗೆ ಮುಂದಾಗುತ್ತಿದ್ದಾರೆ.

ಸಾಮಾನ್ಯವಾಗಿ ವಜ್ರದ ಆಭರಣ ಕೊಳ್ಳುವವರು 25 ವರ್ಷ ದಾಟಿದ ಯುವತಿಯರು, 25–35 ವರ್ಷದೊಳಗಿನ ಮಹಿಳೆಯರಿಗೆ ವಜ್ರದ ಆಭರಣ ಮೇಲೆ ವ್ಯಾಮೋಹ ಹೆಚ್ಚು ಎಂಬುದು ವಜ್ರಾಭರಣಕ್ಕೆ ಹೆಸರಾದ ಕೀರ್ತಿಲಾಲ್ ಕಂಪೆನಿ ಈಚೆಗೆ ಮಾಡಿದ 'ಗ್ರಾಹಕ ಸಮೀಕ್ಷೆ'ಯಿಂದ ತಿಳಿದುಬಂದಿದೆ. ಹಾಗೆಂದು ನಡುವಯಸ್ಸಿನ ಮಹಿಳೆಯರು ವಜ್ರದ ಆಭರಣ ಖರೀದಿಸುವುದಿಲ್ಲ ಎಂದೇನಲ್ಲ. ಮದುಮಗಳು ವಜ್ರದ ಸೆಟ್ ಅನ್ನೇ ಹೆಚ್ಚಾಗಿ ಇಷ್ಟಪಡುತ್ತಾಳೆ. ಉತ್ತರ ಭಾರತೀಯರಿಗಿಂತ ಹೆಚ್ಚು ದಕ್ಷಿಣ ಭಾರತೀಯರಿಂದ ವಜ್ರದ ಆಭರಣಗಳಿಗೆ ಬೇಡಿಕೆ ಹೆಚ್ಚು. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಮಹಿಳೆಯರು ವಜ್ರದ ಆಭರಣಗಳನ್ನು ಖರೀದಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ.

## ಖರೀದಿಸುವ ಮುನ್ನ..



ವಜ್ರದಾಭರಣ ಖರೀದಿಸುವಾಗ ಆದಷ್ಟು ಬ್ರ್ಯಾಂಡ್ ಇರುವ ಅಥವಾ ಹೆಸರುವಾಸಿಯಾದ ಮಳಿಗೆಗೆ ಹೋಗುವುದು ಒಳ್ಳೆಯದು. ಅಲ್ಲಿ ಪ್ರಮಾಣೀಕೃತ ಒಡವೆಗಳು ಸಿಗುವುದರಿಂದ ಹಾಗೂ ವಜ್ರದ ಒಡವೆಯನ್ನು ವಾಪಸ್ ಪಡೆಯುವ ಮೌಲ್ಯ (ರೀಸೇಲ್ ವ್ಯಾಲ್ಯೂ) ಇರುವುದರಿಂದ ಗ್ರಾಹಕರಿಗೆ ಸುರಕ್ಷೆ ಹೆಚ್ಚು.

ವಜ್ರದ ಆಭರಣದ ಬೆಲೆ ನಿರ್ಧಾರವಾಗುವುದು ಪ್ರಮುಖ ನಾಲ್ಕು ಅಂಶಗಳಿಂದ. (4 C.) ಕಟ್, ಕಲರ್, ಕ್ಲ್ಯಾರಿಟಿ ಮತ್ತು ಕ್ಯಾರೆಟ್. ಈ ನಾಲ್ಕೂ ಪ್ರಮುಖ ಅಂಶಗಳ ಮೇಲೆಯೇ ವಜ್ರಕ್ಕೆ ಪ್ರಮಾಣಪತ್ರ ಕೊಡಲಾಗುತ್ತದೆ. ಈ ಅಂಶಗಳ ಆಧಾರದ ಮೇಲೆಯೇ ಬೆಲೆಯೂ ನಿಗದಿಯಾಗುತ್ತದೆ. ಇದೇ ಕಾರಣಕ್ಕೆ ವಜ್ರದ ಬೆಲೆಯಲ್ಲಿ ಮಳಿಗೆಯಿಂದ ಮಳಿಗೆಗೆ ವ್ಯತ್ಯಾಸವಿರುತ್ತದೆ.